(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):- 1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, ''1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟನೆ (1)

ಉಪಾಧ್ಯಕ್ಷಿಣಿಯವರು:- ''ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ, ವಿಧಾನ ಸಭೆಯಿಂದ ಅಂಗೀಕಾರವಾದ 1992ನೇ ಸಾಲಿನ ಕರ್ನಾಟಕ ವಕ್ಫ್ ಮಂಡಳಿಯ ವಿಶೇಷಾಧಿಕಾರಿಯು ನೇಮಕ, ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ: 12-1-1993ರಲ್ಲಿ ಅನುಮೋದಿಸಲಾಗಿತ್ತೆಂದು ತಿಳಿಸುತ್ತೇನೆ.''

ಪ್ರಕಟಣೆ (2)

ಉಪಾಧ್ಯಕ್ಷಿಣಿಯವರು:- ''ದಿನಾಂಕ: 2-4-1992 ರಂದು ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡ, ಶ್ರೀ ವಾಟಾಳ್ ನಾಗರಾಜ್, ಶ್ರೀ ಬೈರೇಗೌಡ ಹಾಗೂ ಶ್ರೀ ನಂಜುಂಡಸ್ವಾಮಿಯವರು ಹಕ್ಕುಚ್ಯುತಿ ಸೂಚನೆಯನ್ನು ನೀಡಿ, ಶ್ರೀ ರಾಮಲಿಂಗರೆಡ್ಡಿಯವರ ಪ್ರಶ್ನೆಗೆ ಉಚ್ಚನ್ಯಾಯಾಲಯವು ಸದನಕ್ಕೆ ಮಾಹಿತಿ ನೀಡಲು ನಿರಾಕರಿಸಿದೆ ಎಂದು ಸತ್ಯಕ್ಕೆ ದೂರವಾದ ಉತ್ತರವನ್ನು ಇತ್ತು ಕಾನೂನು ಮಂತ್ರಿಗಳು ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ, ಎಂದು ಆಪಾದಿಸಿದ ವಿಷಯವನ್ನು ಮಾನ್ಯ ಸಭಾಧ್ಯಕ್ಷರವರು ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗಾಗಿ ದಿನಾಂಕ: 8-12-1992 ರಂದು ಒಪ್ಪಿಸಿರುತ್ತಾರೆ.

ಈಗ ಸದನವು ಮುಂದೂಡಲ್ಪಟ್ಟು ಮಧ್ಯಾಹ್ನ 3-00 ಗಂಟೆಗೆ ಪುನಃ ಸೇರುತ್ತದೆ.

(ಸದನವು 1-52ಕ್ಕೆ ಕಲಾಪವನ್ನು ಮುಂದೂಡಿ, ಮಧ್ಯಾಹ್ನ 3-00 ಗಂಟೆಗೆ ಸೇರಲು ನಿರ್ಧರಿಸಿತು.)

(ಸಭೆಯು 3-12 ನಿಮಿಷಕ್ಕೆ ಪ್ರಾರಂಭವಾಯಿತು)

(ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿದ್ದರು.)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ನಮ್ಮ ಸಭೆ ಒಂದು ದಿವಸ ಮುಂದುವರಿದಿದೆ. ಇನ್ನು ಎಷ್ಟು ದಿವಸ ಮುಂದುವರಿಯುತ್ತದೆಯೋ ನಮಗೆ ಗೊತ್ತಿಲ್ಲ, ಮತ್ತೊಂದು ತಾವು ಸಲಹಾ ಸಮಿತಿ ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದೀರಿ ಅದನ್ನು ಕರೆಯುತ್ತೀರೋ ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಇಲ್ಲಿ 100 ದಿವಸ ಸಭೆ

ಸೇರಬೇಕೆಂದು ನಾವು ಮಾತನಾಡುತ್ತಿದ್ದೇವೆ, ಸುಮ್ಮನೆ ಇದು ಚರ್ಚೆಯ ವಸ್ತುವಾಗಿದೆಯೇ ಹೊರತು, ಸರ್ಕಾರದವರು ಶಾಸನಸಭೆಯನ್ನು ಒಂದು ವರ್ಷದಲ್ಲಿ ಎಷ್ಟು ದಿನ ಕರೆಯಬೇಕೆನ್ನುವ ನಿರ್ಧಾರ ಮಾಡಿದ್ದೀರಿ? ಇದರ ಬಗ್ಗೆ ಸಭೆಯಲ್ಲಿ ಸರ್ಕಾರ ಒಂದು ಹೇಳಿಕೆಯನ್ನೂ ಸಹ ಕೊಟ್ಟಿಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು, ನಾವು ಸಭೆಯನ್ನು ಇಷ್ಟು ದಿವಸ ನಡೆಸುತ್ತೇವೆ. ಆಯವ್ಯಯ ಅಧಿವೇಶನ ಇಷ್ಟು ದಿವಸ, ಚಳಿಗಾಲದ ಅಧಿವೇಶನ ಇಷ್ಟು ದಿವಸ ಎಂದು ಹೇಳಿಲ್ಲ. ಇದೆಲ್ಲಾ ಬರೀ ಪತ್ರಿಕೆಗಳಲ್ಲಿ ಬಂದಿದೆ. ಮತ್ತು ನಮಗೂ ತೆರೆಮರೆಯಲ್ಲಿ ಹೇಳಿದ್ದಾರೆ. ಅವರು ಈ ಸಭೆಯಲ್ಲಿ ಸರ್ಕಾರದ ನಿಲುವು ಏನು ಎನ್ನತಕ್ಕಂಥಾದ್ದನ್ನು ಹೇಳಬೇಕು. ಅನೇಕ ವಿಚಾರಗಳು ಇನ್ನು ಚರ್ಚೆ ಆಗಬೇಕಾಗಿರುವುದರಿಂದ ಇವತ್ತು ಮುಗಿಯುವ ಮಟ್ಟದಲ್ಲಿ ಇಲ್ಲ. ಆದ್ದರಿಂದ ಸಭೆಯನ್ನು ಮುಂದುವರಿಸುತ್ತೀರಾ? ಇದರ ಬಗ್ಗೆ ನಾವು ಬಹಳ ಕತ್ತಲೆಯಲ್ಲಿ ಇದ್ದೇವೆ. ತಾವು ಸ್ವಲ್ಪ ಬೆಳಕು ಚೆಲ್ಲಬೇಕೆಂದು ನಾನು ಕಳಕಳಿಯ ಪ್ರಾರ್ಥನೆ.

ಅಧ್ಯಕ್ಷರು:– 3 ಗಂಟೆಗೆ ಅಂತ ಅನೌನ್ಸ್ ಮಾಡಿದ್ದೆವು. ಈಗ ಕೋರಂ ಆಗಲು 3–15 ನಿಮಿಷ ಆಯಿತು.

ಶ್ರೀ ವಾಟಾಳ್ ನಾಗರಾಜ್:– ನಮ್ಮನ್ನು ನೀವು ಆಕ್ಷೇಪಣೆ ಮಾಡುವಂತೆ ಇಲ್ಲ. ನಾವು 2–3 ಜನ ಸದಸ್ಯರು ಎಷ್ಟು ಹೊತ್ತು ನೀವು ಕುಳಿತುಕೊಳ್ಳಿ ಎಂದು ಹೇಳಿದರೂ ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು:– ಈ ದೃಷ್ಟಿಯಿಂದಲೇ ನಾನು ರೂಲ್ಸ್ ಕಮಿಟಿ ಎಂದು ಒಂದು ಮಾಡಿದೆ. ಕೋರಂ ಮುಂತಾದ ಕನಿಷ್ಟ ಅವಶ್ಯಕತೆಗಳನ್ನು ಬದಿಗೊತ್ತಬೇಕು, ಕೆಲವು ಬದಲಾವಣೆ, ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಹೇಳಿ, ಅದಕ್ಕೆ ಅವಕಾಶ ಆಗಲಿಲ್ಲ. ಯಾರೂ ಮೀಟಿಂಗ್‌ಗೆ ಬರುತ್ತಿಲ್ಲ. ಆದ್ದರಿಂದ ಚಳಿಗಾಲದ ಅಧಿವೇಶನ ಬಿಸಿಲುಗಾಲದ ಅಧಿವೇಶನ ಎಲ್ಲಾ ಮಾಡೋಣ. ಆಮೇಲೆ ನೂರು ದಿವಸ ಮಾಡಬೇಕು ಎನ್ನುವ ತೀರ್ಮಾನಕ್ಕೆ ತಾತ್ವಿಕವಾಗಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ ಬಹಳ ಸಂತೋಷದ ವಿಚಾರ. ನಾವು ಪ್ರಿಸೈಡಿಂಗ್ ಆಫೀಸರ್ಸ್ ಕಾನ್ಫರೆನ್ಸ್‌ಗೆ ಹೋದಾಗ ಅಲ್ಲಿ ಮೂಡಿ ಬಂದಿದ್ದುದು ಸದನ ವರ್ಷದಲ್ಲಿ ಸುಮಾರು 80 ರಿಂದ 120 ದಿವಸ ಆಗಬೇಕು ಎನ್ನುವ ಒಂದು ಅಂದಾಜು ಬಂತು. ಆಯಾಯ ರಾಜ್ಯದ ಅವಶ್ಯಕತೆಗಳು ಆಯಾಯ ರಾಜ್ಯದ ಗಾತ್ರ ಅದರ ವರ್ಕ್‌ಲೋಡ್ ಇದನ್ನು ಗಮನದಲ್ಲಿಟ್ಟುಕೊಂಡು 80ರಿಂದ 110–120 ದಿವಸ ಸದನ ಕೆಲಸ ಮಾಡಬೇಕು. ತಾತ್ವಿಕವಾಗಿ ನಮ್ಮ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ ಎನ್ನತಕ್ಕಂಥ ಅರಿವು ನಿಮಗೆ ಇದೆ, ಆದ್ದರಿಂದ ಈ ವರ್ಷ ನೂರು ದಿವಸ ಕೂರೋಣ. ಇದಕ್ಕೆ ಸರ್ಕಾರದ ಸಹಕಾರ ಇದೆ ಎನ್ನತಕ್ಕಂಥ ವಿಶ್ವಾಸ ನನಗಿದೆ.

ಶ್ರೀ ವಾಟಾಳ್ ನಾಗರಾಜ್:– ಸರ್ಕಾರದ ಕಡೆಯಿಂದ ಇದರ ಬಗ್ಗೆ.....

ಅಧ್ಯಕ್ಷರು:– ನಾನು ಹೇಳಿದೆ ನನಗೆ ವಿಶ್ವಾಸ ಇದೆ ಎಂದು.

ಶ್ರೀ ವಾಟಾಳ್ ನಾಗರಾಜ್:– ಅನೇಕ ವಿಷಯಗಳ ಬಗ್ಗೆ ತಾವು ವಿಶ್ವಾಸ ಇಟ್ಟುಕೊಂಡಿದ್ದೀರಿ ನಾವು ವಿಶ್ವಾಸ ಇಟ್ಟುಕೊಂಡಿದ್ದೇವೆ. ಆದರೆ ಒಂದೊಂದು ಸಾರಿ ನಮ್ಮ ವಿಶ್ವಾಸಕ್ಕೆ ಭಂಗ ಬರುತ್ತದೆ. ಅಂತಹ ಪ್ರಸಂಗಗಳು ನಡೆದಿವೆ.

ಅಧ್ಯಕ್ಷರು:– ಭಂಗ ಬಂದಾಗ ನಾವು ನೀವು ಸೇರಿ ಜೊತೆಯಲ್ಲಿ ಏನು ಮಾಡಬೇಕು ಅದನ್ನು ಮಾಡೋಣ. ಸಧ್ಯಕ್ಕೆ ವಿಶ್ವಾಸ ಇಟ್ಟುಕೊಂಡು ಮುಂದುವರಿಯೋಣ.

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ನಂಬಿಕೆ ಬಗ್ಗೆ ನಮ್ಮದೂ ಸಹ ಮತ ಇದೆ.

ಅಧ್ಯಕ್ಷರು:– ನಾನು ಯಾವಾಗಲೂ ನಂಬಿಕೆ ಮೇಲೆ ಪ್ರೊಸೀಡ್ ಮಾಡುವವನು.

ಶ್ರೀ ವಾಟಾಳ್ ನಾಗರಾಜ್:– ಎಲ್ಲಿಯವರೆಗೆ ಈ ತರಹ ನಂಬಿಕೆ ಮೇಲೆ ಇರುತ್ತೀರಿ?

ಅಧ್ಯಕ್ಷರು:– ಅವರು ಭಂಗ ಮಾಡುವವರೆಗೂ.

ಶ್ರೀ ಆರ್.ವಿ. ದೇಶಪಾಂಡೆ:– ಒಂದು ಸಂತೋಷದ ಸಂಗತಿ ಏನೆಂದರೆ, ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು 100 ದಿನ ಸೆಷನ್ ನಡೆಯಬಹುದೆಂದು ಹೇಳಿದ್ದಾರೆ.

ಅಧ್ಯಕ್ಷರು:– ಈ ಶ್ರೀ ಚಂದ್ರೇಗೌಡ, ಗೊಬ್ಬರದ ಮೇಲೆ ಮಾತನಾಡುವುದು.

ಶ್ರೀ ಸಿ. ಬೈರೇಗೌಡ:– ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಬಹಳ ಮುಖ್ಯವಾದಂಥ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೊರಟಿದ್ದೇನೆ. ಆದಕ್ಕೆ ಮಾನ್ಯ ಚಂದ್ರೇಗೌಡರನ್ನು ಕರೆದಿದ್ದೀರಿ. ಸರ್ಕಾರದಿಂದ ಒಂದು ಬ್ಯಾಕ್‌ಗ್ರೌಂಡ್ ಪೇಪರ್ ಕೊಟ್ಟರೆ ನಮ್ಮ ಚರ್ಚೆಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು:– ಹಾಗಾದರೆ ಇದನ್ನು ಮುಂದಿನ ತಿಂಗಳು ತೆಗೆದುಕೊಳ್ಳೋಣ. ಬ್ಯಾಕ್‌ಗ್ರೌಂಡ್ ಪೇಪರ್ ಮಾಡುವುದಕ್ಕೆ ಹೇಳುತ್ತೇವೆ. ಅದನ್ನು ಸರ್ಕ್ಯುಲೇಟ್ ಮಾಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಅವರ ಹತ್ತಿರ ಬ್ಯಾಕ್‌ಗ್ರೌಂಡ್ ಪೇಪರ್ ಇದೆ ಎಂದು ನನ್ನ ಹತ್ತಿರ ಮಾಹಿತಿ ಇದೆ. ಅದು ಕೊಟ್ಟರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಪ್ರಿಪೇರ್ ಮಾಡಿಲ್ಲ.

ಅಧ್ಯಕ್ಷರು:– ಮುಂದಿನ ತಿಂಗಳು ಆಷ್ಟು ಹೊತ್ತಿಗೆ ಮಾಡುತ್ತಿರಾ? ಬ್ಯಾಕ್‌ಗ್ರೌಂಡ್ ಪೇಪರ್ ಮುಂದಿನ ತಿಂಗಳು ನಿಮಗೆ ಕೊಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಇಂಥಾ ಗಹನವಾದ ವಿಷಯದ ಬಗ್ಗೆ ಸರ್ಕಾರ ಎಷ್ಟರಮಟ್ಟಿಗೆ ಶ್ರದ್ಧೆ ವಹಿಸುತ್ತಿದೆ? ಕಾಳಜಿ ಎಷ್ಟಿದೆಯೆಂದು ಇದರಿಂದ ತೋರುತ್ತಿದೆ.

ಅಧ್ಯಕ್ಷರು:– ಮೊದಲೆ ನೀವು ಅವರನ್ನು ಬ್ಯಾಕ್‌ಗ್ರೌಂಡ್ ಪೇಪರ್ ಒದಗಿಸಿ ಎಂದು ಕೇಳಿದ್ದರೆ ಅವರು ಬ್ಯಾಕ್‌ಗ್ರೌಂಡ್ ಪೇಪರ್ ಒದಗಿಸುತ್ತಿದ್ದರು. ಈಗ ನೀವು ಎದ್ದು ನಿಂತುಕೊಂಡು, ನಾನು ನಿಯಮ 68ರ ಪ್ರಕಾರ ಚಂದ್ರೇಗೌಡರನ್ನು ಕರೆದ ಮೇಲೆ, ಬ್ಯಾಕ್ ಗ್ರೌಂಡ್ ಪೇಪರ್ ಕೊಡ್ಸಿ ನಮಗೆ ಅಂದರೆ,

ಶ್ರೀ ಸಿ. ಬೈರೇಗೌಡ:– ನಮಗೆ ಚರ್ಚೆಗೆ ಅನುಕೂಲವಾಗುತ್ತದೆ. ಸರ್ಕಾರದವರ ಹತ್ತಿರ ಎಷ್ಟು ಗೊಬ್ಬರ ಖರ್ಚಾಗಿದೆ? ಎಷ್ಟು ಖರ್ಚಾಗಿಲ್ಲವೆಂದು ಅಧಿಕೃತ ಮಾಹಿತಿ ಇರುತ್ತದೆ. ಏಕೆಂದರೆ ನಾವು ಹೊರಗಡೆ ಪತ್ರಿಕೆಗಳಲ್ಲಿ ಸಾಕಷ್ಟು ಓದಿದ್ದೇನೆ. ಗೊಬ್ಬರದ ಖರ್ಚು ಕಡಿಮೆಯಾಗಿ ಇಳುವರಿ ಕಡಿಮೆಯಾಗಿದೆಯೆಂದು ನಾವು ಓದಿದ್ದೇವೆ. ಇದನ್ನು ಅಧಿಕೃತವಾಗಿ ಕೊಟ್ಟರೆ ಚರ್ಚೆಗೆ ಅನುಕೂಲವಾಗುತ್ತದೆಂದು ಅಷ್ಟೇ ನನ್ನ ಮನವಿ.

ಶ್ರೀ ವಾಟಾಳ್ ನಾಗರಾಜ್:– ನಮ್ಮ ಸರ್ಕಾರದ ನೀತಿ ಈ ತರಹ ಇದೆಯೆಂದು ಸರ್ಕಾರ ಒಂದು ಹೇಳಿಕೆ ಕೊಡಬಹುದಾಗಿತ್ತು.

ಅಧ್ಯಕ್ಷರು:– 68ನೇ ನಿಯಮದ ಕೆಳಗೆ ನೀವು ಚರ್ಚೆಯನ್ನು ಪ್ರಾರಂಭಿಸಿದ್ದೀರಿ. ಸೂಚನೆ ಕೊಟ್ಟಿದ್ದೀರಿ. 68ನೇ ವಿಧಿ ನಿಯಮದ ಪ್ರಕಾರ ಅವರು ಹೇಳಿಕೆ ಕೊಡಬೇಕೆಂದು ಏನಿದೆ?

ಏನೂ ಇಲ್ಲವಲ್ಲ. ಇದು ಮುಕ್ತವಾದಂಥ ಚರ್ಚೆ, ನಿಯಮ 68ರ ಪ್ರಕಾರ ಚಂದ್ರೇಗೌಡರು ಎಲ್ಲಾ ಉತ್ತರ ಹೇಳುತ್ತಾರೆ ನಿಮಗೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಈ ಚರ್ಚೆಗೆ ಬ್ಯಾಕ್‌ಗ್ರೌಂಡ್ ನಿಮಗೆ ಹೇಳಬೇಕಾಗಿದೆ.

ಅಧ್ಯಕ್ಷರು:- ಆಮೇಲೆ ಒಂದು, ತಾವು ದಯವಿಟ್ಟು ಪ್ರಾರಂಭ ಮಾಡುವುದಕ್ಕೆ ಮೊದಲು, ಈ ಚರ್ಚೆ 3.20ಕ್ಕೆ ಪ್ರಾರಂಭವಾಗುತ್ತದೆ. 4 ಗಂಟೆಗೆ ಈ ಚರ್ಚೆ ಮುಗಿಸಿ ಅನಂತರ ಎರಡು ವಿಚಾರಗಳಿವೆ. ಅದಕ್ಕೆ ಹೋಗಬೇಕಾಗುತ್ತದೆ.

ನಿಯಮ 68ರ ಮೇರೆಗೆ

ರಸಗೊಬ್ಬರದ ಬೆಲೆ ಏರಿಕೆಯ ಬಗ್ಗೆ.

† ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ):- ಈ ಚರ್ಚೆಯ ಬ್ಯಾಕ್‌ಗ್ರೌಂಡ್ ಏನೆಂದರೆ, ನಾನು ಸದನದಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೆ. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 18. ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದರು. ಅದೇ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆತ್ಮಾನಂದರವರ ಪ್ರಶ್ನೆಯೂ ಇತ್ತು. ಪ್ರಶ್ನೆ ಸಂಖ್ಯೆ: 445 ಈ ಉತ್ತರಗಳು ಒಂದಕ್ಕೊಂದು ಸಮಂಜಸವಾಗಿರಲಿಲ್ಲ. ಮತ್ತೆ ಸಾಕಷ್ಟು ಮಾಹಿತಿ ಕೂಡಾ ಪ್ರಶ್ನೋತ್ತರ ಕಾಲದಲ್ಲಿ ಸಿಕ್ಕುವುದಿಲ್ಲ ಅನ್ನುವಂಥ ಕಾರಣದಿಂದ ತಾವು ನಮಗೆ ಈ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ಮೊದಲು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಬಹಳ ಪ್ರಾಮುಖ್ಯವಾದಂಥ, ರೈತರಿಗೆ ಸಂಬಂಧಪಟ್ಟಂಥ ಈ ವಿಚಾರ, ನಮ್ಮ ಪ್ರಶ್ನೆಗೆ ಕೊಟ್ಟಿರತಕ್ಕಂಥ ಉತ್ತರ, ನಾನು ಕೇಳಿರುವ ಪ್ರಶ್ನೆ ಒಂದು ಅವರು ಕೊಟ್ಟಿರುವ ಉತ್ತರ ಮತ್ತೊಂದು. ಇದು ಅವತ್ತು ಗೊಂದಲಕ್ಕೆ ಕಾರಣವಾಗಿ ನಾವು ಸಭಾತ್ಯಾಗ ಮಾಡುವಂಥ ಸ್ಥಿತಿಗೆ ಹೋಗಬೇಕಾಯಿತು.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಸ್ನೇಹಿತರು, ತಮ್ಮಲ್ಲಿ ನನ್ನ ಅರಿಕೆ ಏನೆಂದರೆ ಇವರಿಗೆ ಯಾವ ಯಾವ ವಿಷಯದಲ್ಲಿ ಅಂಕಿಅಂಶಗಳು ಬೇಕು, ಅವರು ಇಲ್ಲಿ ಹೇಳತಕ್ಕಂಥ ವಿಷಯಗಳಿಗೆ ಸರ್ಕಾರದಿಂದ ಮೊದಲೇ ಏನಾದರೂ ತಿಳಿದುಕೊಳ್ಳಬೇಕಾದಂಥ ವಿಷಯ ನನಗೆ ಸೂಕ್ಷ್ಮವಾಗಿ ಹೇಳಿದರು ಅದನ್ನು ತಯಾರು ಮಾಡುತ್ತಿದ್ದೆ. ನನಗೆ ಗೊತ್ತಿರಲಿಲ್ಲ. ಅವರಿಗೆ ಯಾವ ವಿಷಯವಾಗಿ ಹೆಚ್ಚು ಅಂಕಿಅಂಶಗಳು ಬೇಕೆಂದು? ಅದರಿಂದ ತಾವು ಈಗಾಗಲೇ ಸೂಚನೆ ಮಾಡಿರುವ ಹಾಗೆ, ಒಪ್ಪಿಕೊಂಡರೆ, ಅದನ್ನು ನಾಳೆ ನಾಡಿದ್ದಾದರೂ ತಯಾರು ಮಾಡಬಹುದು. ಅದಕ್ಕೆ ಅಷ್ಟೇನೂ ಕಷ್ಟ ಇಲ್ಲ. ಆದರೆ ಸ್ವಲ ಕಾಲಾವಕಾಶ ಹೆಚ್ಚಿಗೆ ಕೊಟ್ಟಿದ್ದರೆ ವಿಷಯ ಸಂಗ್ರಹಣೆ ಮಾಡಿಕೊಡಬಹುದಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಬಿ.ಎ.ಸಿ.ಯಲ್ಲಿ ವಿಷಯ ಚರ್ಚೆ ಮಾಡಬೇಕೆಂದು ಬಂದಾಗ ನಾವು ಮುಖ್ಯಮಂತ್ರಿಗಳಿಗೆ ಏನು ಸಲಹೆ ಕೊಟ್ಟಿದ್ದೇವೆ ಎಂದರೆ, ನೀವು ಒಂದು ನಿರ್ಣಯವನ್ನು ಅಸೆಂಬ್ಲಿಯಲ್ಲಿ ಇಡಿ, ಆಂಧ್ರಪ್ರದೇಶ ಸರಕಾರದವರು ಮಾಡಿದ್ದಾರೆ. ರಸಗೊಬ್ಬರದ ಬೆಲೆಯು ಜಾಸ್ತಿಯಾಗಿರತಕ್ಕಂಥಾದ್ದು ಕೇಂದ್ರ ಸರಕಾರ, ಇವೊತ್ತು ಅವರಲ್ಲಿರತಕ್ಕಂಥ ಆರ್ಥಿಕ ನೀತಿಯಂತೆ ಇರತಕ್ಕಂಥ ಸಬ್ಸಿಡಿಯನ್ನು ರದ್ದು ಮಾಡಿರುವುದು. ಅವರು ಕೊಡುತ್ತಾ ಇದ್ದಂಥ ಆರು ಸಾವಿರ ಕೋಟಿ ರೂಪಾಯಿಗಳನ್ನು ನಿಲ್ಲಿಸಿರುವುದರಿಂದ ಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಕಾಂಗ್ರೆಸ್‌ನಲ್ಲಿಯೂ ರೈತರು ಇದ್ದಾರೆ, ಎಲ್ಲಾ ಪಾರ್ಟಿಗಳಲ್ಲಿಯೂ ರೈತರ ಹಿತೈಷಿಗಳು ಇದ್ದಾರೆ. ನಾವೆಲ್ಲರೂ ಸೇರಿಕೊಂಡು ಯೂನಾನಿಮಸ್ ಆಗಿ ಆಂಧ್ರಪ್ರದೇಶದ ಅಸೆಂಬ್ಲಿಯಲ್ಲಿ ನಿರ್ಣಯವನ್ನು ಮಾಡಿದ ಹಾಗೆ ಒಂದು